# ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

## ಶಿಕ್ಷಕ–ರಕ್ಷಕ ಸಂಘ 2023–24

2023–24ನೇ ಸಾಲಿನ ಶಿಕ್ಷಕ–ರಕ್ಷಕ ಸಂಘದ ಕಾರ್ಯಕಾರಿ ಸಮಿತಿಯ ವಿವರ ಈ ಕೆಳಗಿನಂತಿದೆ.

**ಶಿಕ್ಷಕರ ವತಿಯಿಂದ:**

| | | |
|---|---|---|
| ಅಧ್ಯಕ್ಷರು | : | ಡಾ. ಅನಸೂಯ ರೈ (ಪ್ರಾಂಶುಪಾಲರು) |
| ಉಪಾಧ್ಯಕ್ಷರು | : | 1. ಡಾ. ಜಯರಾಜ್ ಎನ್.<br>2. ಡಾ. ಸುಧಾ ಎನ್. ವೈದ್ಯ |
| ಕಾರ್ಯದರ್ಶಿ | : | ಶ್ರೀಮತಿ ಅರುಣಾ ಕುಮಾರಿ |
| ಕೋಶಾಧಿಕಾರಿ | : | ಡಾ. ಇಂದಿರಾ ಜೆ. |
| ಪದನಿಮಿತ್ತ ಸದಸ್ಯರು | : | 1. ಪ್ರೊ. ಲತಾ ಪಂಡಿತ್<br>2. ಡಾ. ಕುಮಾರ ಸುಬ್ರಹ್ಮಣ್ಯ ಭಟ್<br>3. ಡಾ. ಸಿದ್ಧರಾಜು ಎಂ.ಎಸ್. |
| ಸಾಮಾನ್ಯ ಸದಸ್ಯರು | : | 1. ಡಾ. ಗಾಯತ್ರಿ<br>2. ಪ್ರೊ. ಸುಭಾಶಿಣಿ ಶ್ರೀ ವತ್ಸ<br>3. ಡಾ. ಭಾರತಿ ಪಿಲಾರ್ |

**ರಕ್ಷಕರ ವತಿಯಿಂದ**

| | | |
|---|---|---|
| ಕಾರ್ಯಾಧ್ಯಕ್ಷರು | : | 1. ಶ್ರೀ ಗಿಲ್ಬರ್ಟ್ ದೀಪಕ್ ಡಿ'ಸೋಜಾ |
| ಉಪಾಧ್ಯಕ್ಷರು | : | 1. ಶ್ರೀ ಎಸ್. ಎನ್. ಗಂಗಾಧರ್<br>2. ಶ್ರೀ ಸದಾಶಿವಮ್<br>3. ಶ್ರೀ ಶ್ರೀನಿವಾಸ್ |
| ಸಹ ಕಾರ್ಯದರ್ಶಿ | : | 1. ಶ್ರೀಮತಿ ಚೇತನಾ |
| ಸಾಮಾನ್ಯ ಸದಸ್ಯರು | : | 1. ಶ್ರೀಮತಿ ತೇಜಾಕ್ಷಿ<br>2. ಶ್ರೀ ವಾಮನ ಆಚಾರ್ಯ<br>3. ಶ್ರೀ ಹರೀಶ್ ಬಂಗೇರ<br>3 ಶ್ರೀ ರಾಮಕೃಷ್ಣ ನಾಯಕ್<br>4 ಶ್ರೀ ಮೊಹಮದ್ ಅಸೀಮ್ ಎಸ್.<br>5. ಶ್ರೀ ಬಸಮ್ಮ |

Aruna Kumari
ಕಾರ್ಯದರ್ಶಿ

Anasuya
ಪ್ರಾಂಶುಪಾಲರು
ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂ

# UNIVERSITY COLLEGE MANGALORE
ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು

A Constituent College of Mangalore University

*(Reaccredited by NAAC with 'A' Grade and College with Potential for Excellence)*

Office of the Principal,
U.P. Malya Road,
Hampankatta,
Mangalore-575001

ಪ್ರಾಂಶುಪಾಲರ ಕಚೇರಿ,
ಯು.ಪಿ. ಮಲ್ಯ ರಸ್ತೆ,
ಹಂಪನಕಟ್ಟ,
ಮಂಗಳೂರು–575001.

Email:ucmangalore1@gmail.com Phone No: 0824 2424760 Website: https://universitycollegemangalore.com


ದಿನಾಂಕ: 21.03.2024

**ದಿನಾಂಕ: 15.03.2024 ರಂದು ನಡೆದ ಶಿಕ್ಷಕ–ರಕ್ಷಕ ಸಂಘದ ವಾರ್ಷಿಕ ಮಹಾಸಭೆಯ ನಡಾವಳಿಗಳು**

1. ಅಪರಾಹ್ನ 2.00 ಘಂಟೆಗೆ ಶ್ರೀಮತಿ ರೇಖಾ ಶೆಟ್ಟಿರವರ ಪ್ರಾರ್ಥನೆಯೊಂದಿಗೆ ವಾರ್ಷಿಕ ಮಹಾಸಭೆ ಆರಂಭಗೊಂಡಿತು. ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರು, ವಿದ್ಯಾರ್ಥಿ ಸಂಘದ ಸಹ ನಿರ್ದೇಶಕರು ಹಾಗೂ ಸಂಘದ ಪದ ನಿಮಿತ್ತ ಸದಸ್ಯರಾದ ಪ್ರೊ. ಲತಾ ಎ. ಪಂಡಿತ್‌ರವರು ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿದರು.
2. ಸಂಘದ ಕಾರ್ಯದರ್ಶಿ ಶ್ರೀಮತಿ ಅರುಣಾ ಕುಮಾರಿಯವರು 2022–23ನೇ ಸಾಲಿನ ಶಿಕ್ಷಕ ರಕ್ಷಕ ಸಂಘದ ವಾರ್ಷಿಕ ವರದಿಯನ್ನು ವಾಚಿಸಿದರು.
3. ಸಂಘದ ಕೋಶಾಧಿಕಾರಿ ಡಾ. ಇಂದಿರಾ ಜೆ. ಅವರು 2022–23ನೇ ಸಾಲಿನ ಲೆಕ್ಕಪತ್ರ ಮಂಡಿಸಿದರು. ಲೆಕ್ಕಪತ್ರವು ಸರ್ವಾನುಮತದಿಂದ ಅಂಗೀಕೃತವಾಯಿತು. ಸಂಘದ ಕಾರ್ಯಾಧ್ಯಕ್ಷರಾದ ಶ್ರೀಮತಿ ಮೈತ್ರೇಯಿರವರು ಸಂಘದ ಕಾರ್ಯಾಧ್ಯಕ್ಷರಾಗಿ ಕಳೆದ ಅನುಭವಗಳನ್ನು ಹಂಚಿಕೊಳ್ಳುತ್ತಾ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ರಕ್ಷಕರ ಜವಾಬ್ದಾರಿಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.
4. ರಕ್ಷಕರೊಂದಿಗೆ ನಡೆದ ಸಂವಾದದಲ್ಲಿ ರಕ್ಷಕರಾದ ಶ್ರೀಯುತ ಹರಿದಾಸ್, ಶ್ರೀ ಗಿಲ್ಬರ್ಟ್ ಡಿ ಸೋಜ ಹಾಗೂ ಶ್ರೀಯುತ ಮೊಹಮದ್ ಅಸೀಮ್‌ರವರು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ದೊರಕುವ ಉತ್ತಮ ಶಿಕ್ಷಣ ಮತ್ತು ಅನುಕೂಲತೆಗಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶದ ಬಗ್ಗೆ ತಮ್ಮ ಅಹವಾಲನ್ನು ತಿಳಿಸಿದರು.
5. ಸಂಘದ ಅಧ್ಯಕ್ಷರಾದ ಪ್ರಾಂಶುಪಾಲರು ರಕ್ಷಕರೊಂದಿಗೆ ನಡೆದ ಸಂವಾದದಲ್ಲಿ ಅವರ ಅಭಿಪ್ರಾಯಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದರು. ಸಭೆಗೆ ಹಾಜರಾದ ರಕ್ಷಕರ ಸಂಖ್ಯೆ ಕಡಿಮೆ ಇದ್ದು ಹಾಜರಾಗುವ ಅಗತ್ಯತೆಯನ್ನು ತಿಳಿ ಹೇಳಿದರು.
6. ಅನಂತರ ಸಂಘದ 2023–24 ರ ಸಾಲಿನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮವನ್ನು ಪ್ರೊ. ಕುಮಾರ ಸುಬ್ರಹ್ಮಣ್ಯ ಭಟ್‌ರವರು ನೆರವೇರಿಸಿದರು. ನೂತನ ಕಾರ್ಯಕಾರಿ ಸಮಿತಿಯ ಎಲ್ಲ ಪದಾಧಿಕಾರಿಗಳು ಹಾಗೂ ಸದಸ್ಯರ ಹೆಸರುಗಳನ್ನು ಸಂಘದ ಅಧ್ಯಕ್ಷರಾದ ಪ್ರಾಂಶುಪಾಲರು ಘೋಷಿಸಿದರು. ನೂತನ ಪದಾಧಿಕಾರಿಗಳಿಗೆ ಹೂ ನೀಡಿ ವೇದಿಕೆಗೆ ಸ್ವಾಗತಿಸಲಾಯಿತು.
7. ನೂತನ ಕಾರ್ಯಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಗಿಲ್ಬರ್ಟ್ ದೀಪಕ್ ಡಿ'ಸೋಜರವರು ತಮ್ಮನ್ನು ಆಯ್ಕೆ ಮಾಡಿದ್ದಕ್ಕಾಗಿ ಎಲ್ಲರಿಗೆ ಕೃತಜ್ಞತೆ ವ್ಯಕ್ತಪಡಿಸಿದರು ಹಾಗೂ ತಾವು ಇಲ್ಲಿನ ಹಿರಿಯ ವಿದ್ಯಾರ್ಥಿಯೆಂಬುದನ್ನು ಎಲ್ಲರ ಗಮನಕ್ಕೆ ತಂದರು ಹಾಗೂ ಸಂಘದ ಎಲ್ಲ ಕಾರ್ಯಚಟುವಟಿಕೆಗಳಿಗೆ ಸಹಕಾರ ಸಲಹೆ ನೀಡುವುದಾಗಿ ಎಲ್ಲಾ ಪದಾಧಿಕಾರಿಗಳ ಪರವಾಗಿ ಭರವಸೆ ನೀಡಿದರು.
8. ಪ್ರಾಂಶುಪಾಲರಾದ ಡಾ. ಅನಸೂಯ ರೈ ಅವರ ಅಧ್ಯಕ್ಷೀಯ ಭಾಷಣದ ನಂತರ ಸಂಘದ ಸದಸ್ಯರಾದ ಡಾ. ಸುಧಾ ಎನ್. ವೈದ್ಯರವರ ವಂದನಾರ್ಪಣೆಯೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯಗೊಂಡಿತು. ಅನಂತರ ರಕ್ಷಕರು ಲಘು ಉಪಹಾರ ಸೇವನೆಯೊಂದಿಗೆ ತಮ್ಮ ಮಕ್ಕಳ ಬಗ್ಗೆ ಶಿಕ್ಷಕರೊಂದಿಗೆ ಸಮಾಲೋಚನೆ ನಡೆಸಿದರು. ಸಭಾ ಕಾರ್ಯಕ್ರಮವನ್ನು ಶಿಕ್ಷಕ–ರಕ್ಷಕ ಸಂಘದ ಸದಸ್ಯರಾದ ಡಾ. ಭಾರತಿ ಪಿಲಾರ್‌ರವರು ನಿರೂಪಿಸಿದರು.

Aruna Kumari

ಕಾರ್ಯದರ್ಶಿ
ಶಿಕ್ಷಕ–ರಕ್ಷಕ ಸಂಘ

ಅಧ್ಯಕ್ಷರು/ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು


MANGALORE UNIVERSITY
UNIVERSITY COLLEGE MANGALORE
Reaccredited with 'A' Grade by NAAC and Recognised as CPE by UGC
PARENT-TEACHER ASSOCIATION



